International Journal of Kannada Research
www.kannadajournal.com

ISSN: 2454–5813
IJKR 2018; 4(3): 20-22
© 2018 IJKR
www.kannadajournal.com
Received: 06-05-2018
Accepted: 07-06-2018

ಲಕ್ಷ್ಮೀಕಾಂತ ಸಿ. ಪಂಚಾಳ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಂಪೂರ ತಾ.ಜಿ. ಬಾಗಲಕೋಟ

Correspondence
ಲಕ್ಷ್ಮೀಕಾಂತ ಸಿ. ಪಂಚಾಳ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಂಪೂರ ತಾ.ಜಿ. ಬಾಗಲಕೋಟ

ಕನ್ನಡ ಸಾಹಿತ್ಯ–ಸಂಸ್ಕೃತಿ: ಒಳನೋಟಗಳು

ಲಕ್ಷ್ಮೀಕಾಂತ ಸಿ. ಪಂಚಾಳ

'ಸಂಸ್ಕೃತಿ' ಮಾನವನ ಅಂತರಂಗದ ಜೀವನದ ಜೀವಂತ ಚಿತ್ರಣವೆಂದೆನಿಸಿದೆ. ಕನ್ನಡ ನಾಡಿನ ಸಂಸ್ಕೃತಿಯು ಬಹು ವಿಶಿಷ್ಟವಾಗಿದೆ. ಇದು 'ಸಮನ್ವಯ ಸಂಸ್ಕೃತಿ' ಎಂದು ಹೆಸರಾಗಿದೆ. ವಿಭಿನ್ನ ಧರ್ಮ, ಸಂಗೀತ, ಸಾಹಿತ್ಯ, ಕಲೆ, ವಾಸ್ತುಶಿಲ್ಪ ಮೊದಲಾದವುಗಳ ಆಗರವೆಂದೆನಿಸಿದೆ. ಭಾರತೀಯ ಸಾಂಸ್ಕೃತಿಕ ಪರಂಪರೆಗೆ ತನ್ನದೆಯಾದ ವಿಶಿಷ್ಟ ಕಾಣಿಕೆ ನೀಡಿ, ತನ್ನ ಹಿರಿಮೆ ಮೆರೆದಿರುವುದು ಹೆಮ್ಮೆಯ ಸಂಗತಿ. ಈ ಸಂಸ್ಕೃತಿಯ ಬಹುಮುಖಿ ಕವಲುಗಳಲ್ಲಿ 'ಸಾಹಿತ್ಯ'ವೂ ಒಂದಾಗಿದೆ.

"ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಸ್ಪಷ್ಟವಾಗಿ ಗೋಚರವಾಗುವುದು ಅದರ ಸಾಹಿತ್ಯದಲ್ಲಿ" ಎಂಬ ಎಚ್. ತಿಪ್ಪೇರುದ್ರಸ್ವಾಮಿಯವರ (ಕ.ಸ.ಸ, ಪು–311) ಮಾತಿನಂತೆ ಕನ್ನಡ ನಾಡು–ನುಡಿಯ ಚಾರಿತ್ರಿಕ ಇತಿಹಾಸವು ಕ್ರಿ.ಪೂ. ದಿಂದಲೇ ಆರಂಭವಾಗುತ್ತದೆ. ಮಹಾಭಾರತದ 'ಸಭಾ' ಮತ್ತು 'ಭೀಷ್ಮ' ಪರ್ವದಲ್ಲಿ, ಶೂದ್ರಕನ 'ಮೃಚ್ಛಕಟಿಕ', ವರಾಹಮಿಹಿರನ 'ಬೃಹತ್ ಸಂಹಿತೆ'ಗಳಲ್ಲಿ ಕನ್ನಡದ ಉಲ್ಲೇಖವಿದೆ.

ಸಿಂಧೂ ನಾಗರಿಕತೆಯ ಮೊಹೆಂಜೊದಾರೋದಲ್ಲಿ ದೊರೆತ ಚಿತ್ರಲಿಪಿಯನ್ನು ಫಾದರ್ ಹೆರಾಸ್‌ರವರು ಓದಿ 'ಕಣ್ಣನೀರ್>ಕನ್ನಡಿಗರ್' ಆಗಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಂತರದ ಕ್ರಿ.ಪೂ ಮೂರನೇ ಶತಮಾನದ ಮೌರ್ಯ ಸಾಮ್ರಾಜ್ಯದ ಚಕ್ರವರ್ತಿ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ್' ಎಂಬ ಪದವು ದೊರೆತಿದೆ. ಈ ಪದವು ಕನ್ನಡದ ಉಪಲಬ್ಧ ಮೊದಲ ಪದ ಎಂದು ಡಿ.ಎಲ್. ನರಸಿಂಹಚಾರ್ಯರವರು ಪ್ರತಿಪಾದಿಸಿದ್ದಾರೆ. 'ಇಸಿಲ್' ಎಂಬುದು 'ಎಯಿಲ್' ಎಂಬ ಪದದಿಂದ ನಿಷ್ಪನ್ನಗೊಂಡಿದೆ. ಹಾಗೆಂದರೆ ಕೋಟೆ, ಕೋಟೆಯಿಂದ ಆವೃತವಾದ ನಾಡು ಎಂದು ಅರ್ಥೈಸಲಾಗಿದೆ.

ಕ್ರಿ.ಶ ಒಂದನೇ ಶತಮಾನದ ಶಾತವಾಹನರ ಶಾಸನಗಳಲ್ಲಿ 'ವಿಲಿವಾಯಕುರಂ' 'ಪುಲುಮಾಯಿ' ಎಂಬ ಪದಗಳು ಕನ್ನಡದೇ ಎಂಬ ವಾದವೊಂದಿದೆ. ಹಾಲನ 'ಗಾಥಾಸಪ್ತಶತಿ' ಎಂಬ ಕೃತಿಯಲ್ಲಿ ತುಪ್ಪ, ಪೊಟ್ಟೆ, ತೀರ್, ಪೀರು ಎಂಬ ನಾಮ ಮತ್ತು ಕ್ರಿಯಾ ಪದಗಳು ಲಭಿಸಿವೆ. ಕ್ರಿ.ಶ ನೂರಾ ಐವತ್ತರ ಸುಮಾರಿನ 'ಗ್ರೀಕ್‌ನ ಆಕ್ಸಿರಿಂಕಸ್ ಪಪರೈ' ಎಂಬ ಗ್ರೀಕ್ ಪ್ರಹಸನ ಒಂದರಲ್ಲಿ ಕನ್ನಡದ ಪದಗಳಿವೆ ಎಂದು ಗೋವಿಂದ ಪೈ ಯವರು ಸೂಚಿಸುತ್ತಾರೆ. ಇದೇ ಅವಧಿಯ ಗ್ರೀಕ್ ದೇಶದ ಪ್ರವಾಸಿ ಟಾಲೆಮಿ ಕನ್ನಡದ ಪ್ರಸಿದ್ಧ ಊರುಗಳನ್ನು ಹೆಸರಿಸಿದ್ದಾನೆ. ಅವುಗಳೆಂದರೆ ಬಾದಿಯಾಮೊವ(ಬಾದಾಮಿ), ಇಂಡೆ(ಇಂಡಿ), ಕಲ್ಲಿಗೇರಿಸ್(ಕಲಗೇರಿ), ಮೊದೊಗೌಲ(ಮುದಗಲ್), ಪೆಟಿರ್ಗಾರ್ (ಪಟ್ಟದಕಲ್ಲು), ಬನವಾಸ್ಯೆ(ಬನವಾಸಿ) ಇತ್ಯಾದಿ. ಅಲ್ಲದೆ ಕ್ರಿ.ಶ ಎರಡನೇ ಶತಮಾನದ ತಮಿಳು ಕೃತಿ 'ಶಿಲಪ್ಪದಿಗಾರಂ' ಎಂಬುದರಲ್ಲಿ 'ಕರುನಾಟರ್' ಎಂಬ ಪದ ಎರಡು ಬಾರಿ ದೊರೆತಿದೆ. ಹೀಗೆ ಕನ್ನಡದ ಪ್ರಾಚೀನತೆಯನ್ನು ಶೋಧಿಸುವ ನಿಟ್ಟಿನಲ್ಲಿ ನಡೆದ ಹಲವು ಪ್ರಯತ್ನಗಳಾಗಿವೆ. ಆದರೆ ಕನ್ನಡ ಸಾಹಿತ್ಯಕ್ಕೆ ಖಚಿತ ದಾಖಲೆ ಅಥವಾ ಮೈಲುಗಲ್ಲು ಕ್ರಿ.ಶ 450 ರ ಹಲ್ಮಿಡಿ ಶಾಸನ. ಇದು ಕನ್ನಡದ ಮೊತ್ತಮೊದಲ ಉಪಲಬ್ಧ ಶಾಸನ. ಅಂದರೆ, ಕನ್ನಡ ಭಾಷೆಯು ಐದನೇ ಶತಮಾನದ ಸಂದರ್ಭಕ್ಕಾಗಲೇ ಬರವಣಿಗೆಗೆ ಇಳಿದಿತ್ತು ಮತ್ತು ಈ ಮುಂಚೆಯು ಬಳಕೆಯಲ್ಲಿತ್ತು ಎಂಬುದನ್ನು ತೋರಿಸುತ್ತದೆ. ಈ ವಿಚಾರವಾಗಿ ಹಲ್ಮಿಡಿ ಶಾಸನವಂತು ಕನ್ನಡಕ್ಕೆ ಸಾವಿರದ ಐದು ನೂರು ವರ್ಷಗಳ ಭವ್ಯ ಇತಿಹಾಸವನ್ನು ದೃಢಪಡಿಸುತ್ತದೆ ಎಂದು ಹೇಳಬಹುದು.

ಕನ್ನಡ ನಾಡು ನುಡಿ ನಾಡವರ ವಿಶೇಷತೆಯ ಬಗ್ಗೆ ಅನೇಕ ಕವಿವರ್ಯರು ಪ್ರಾಚೀನ ಕಾಲದಿಂದಲೂ ಮನಬಿಚ್ಚಿ ಬಣ್ಣಿಸುತ್ತಾ ಬಂದಿದ್ದಾರೆ. ಕನ್ನಡದ ಸಂಸ್ಕೃತಿ, ಸೊಬಗು, ಸೌಂದರ್ಯ, ವೈಭವ ಮೊದಲಾದವುಗಳನ್ನು ಮನೋಜ್ಞವಾಗಿ ಸೆರೆಹಿಡಿದಿದ್ದಾರೆ. ಕನ್ನಡಾಭಿಮಾನವನ್ನು ಮೆರೆದಿದ್ದಾರೆ. ಇದರ ಪಕ್ಷಿನೋಟ ಇಲ್ಲಿದೆ.

ಕ್ರಿ. ಶ. 700 ರ ಬಾದಾಮಿ ಕಪ್ಪೆಅರಭಟ್ಟನ ಶಾಸನವು ಕನ್ನಡಿಗರ ಉದಾತ್ತ ವಿಚಾರ ಮತ್ತು ವ್ಯಕ್ತಿತ್ವವನ್ನು ಬಣ್ಣಿಸುತ್ತದೆ. ಶಾಸನದ ಒಂದು ತ್ರಿಪದಿ ಹೀಗಿದೆ.

"ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ"

ಅಂದರೆ "ಕಪ್ಪೆ ಅರಭಟ್ಟನು ಒಳ್ಳೆಯವರಿಗೆ ಒಳ್ಳೆಯವನು, ಕೆಟ್ಟವರಿಗೆ ಕೆಟ್ಟವನು, ತೊಂದರೆ ಕೊಡಲು ಬಂದವರಿಗೆ, ಸಾಕ್ಷಾತಃ ಮಾಧವನ ರೂಪದಲ್ಲಿ ಸಂಹಾರಿಯಾಗಿದ್ದಾನೆ" ಎಂದರ್ಥ. ಕನ್ನಡಿಗರಾದ ನಾವು ಇಂದಿನ ಸಮಕಾಲೀನ ಸಂದರ್ಭದಲ್ಲಿ ವಿಚಾರಿಸುವುದಾದರೆ 'ಮಾಧವ ನೀತನ್ ಪೆರನಲ್ಲ' ಎಂಬ ಮಾತು ತುಂಬ ಧ್ವನಿಪೂರ್ಣವಾಗಿ ಕಂಡುಬರುತ್ತದೆ. ಇಲ್ಲಿನ ಮಾಧವನು ಕೇವಲ ಮಾಧವನಾಗಿರದೆ, ಸಮಸ್ತ ಕನ್ನಡಿಗರ ಗುಣ ಸ್ವಭಾವವನ್ನು ಮಾಧವ ಪ್ರತಿನಿಧಿಸುವಂತೆ ಕಂಡು ಬರುತ್ತದೆ.

9ನೆಯ ಶತಮಾನದ ಶ್ರೀವಿಜಯನ 'ಕವಿರಾಜಮಾರ್ಗ' ಗ್ರಂಥವು ಕನ್ನಡದ ಮುಕುಟಪ್ರಾಯ ಸ್ಥಾನ ಪಡೆದಿದೆ. ಕನ್ನಡದ ಮೊದಲ ಉಪಲಬ್ಧ ಕೃತಿಯಾಗಿದೆ. ಇದು ಕನ್ನಡ ನಾಡು ನುಡಿ ನಾಡವರ ಸಾಂಸ್ಕೃತಿಕ ವಿಚಾರದ ಮೇರು ಪ್ರಾಯ ನಿಲುವುಗಳನ್ನು ಪ್ರತಿಪಾದಿಸುತ್ತಾ ಕನ್ನಡಿಗರ ಕೈಪಿಡಿಯಂತಿದೆ.

ಕವಿರಾಜಮಾರ್ಗಕಾರನು ಮೊಟ್ಟಮೊದಲ ಬಾರಿಗೆ ಕನ್ನಡ ನಾಡಿನ ವಿಸ್ತಾರವನ್ನು ಭೂಮಂಡಲದಲ್ಲಿ ಸ್ಪಷ್ಟವಾಗಿ ಎದ್ದು ಕಾಣುವ " ಕಾವೇರಿಯಿಂದಮಾ ಗೋದಾವರಿಮಿರ್ದ ನಾಡದಾ ಕನ್ನಡದೊಳ್" ಎಂದು ತಿಳಿಸುತ್ತಾನೆ. ಇದು ಕನ್ನಡಿಗರ ಅಭಿಮಾನದ ದ್ಯೋತಕ. ಈ ವಿಶಾಲವಾದ ಪ್ರದೇಶದಲ್ಲಿ ಈಗಿನ ಬಾಗಲಕೋಟ ಜಿಲ್ಲೆಯ ಪಟ್ಟದಕಲ್ಲು (ಕಿಸುವೋಲಿಲ್), ಕೊಪ್ಪಳ ಜಿಲ್ಲೆಯ ಕೊಪ್ಪಳ(ಕೊಪಣನಗರ), ಗದಗ ಜಿಲ್ಲೆಯ ಲಕ್ಷ್ಮೇಶ್ವರ (ಪುಲಿಗೆಱೆ), ಬೆಳಗಾವಿ ಜಿಲ್ಲೆಯ ಒಕ್ಕುಂದ ಈ ಪ್ರದೇಶವೂ 'ತಿರುಳ್ಗನ್ನಡ' ವನ್ನಾಡುವ ಪ್ರದೇಶವೆಂದು ಹೇಳುತ್ತಾನೆ. ಮುಂದುವರೆದು ಇವರು 'ತಂತಮ್ಮ ನುಡಿಯೊಳೆಲ್ಲರ್ ಜಾಣರ್' ಎಂದು ಘೋಷಿಸುತ್ತಾನೆ.

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್
(ದ್ವಿತೀಯ ಪರಿಚ್ಛೇದಂ ಪದ್ಯ–28)

ಕನ್ನಡ ನಾಡಿನವರ ಅಧಿಕೃತವಾದ ಗುಣವಿಶೇಷತೆಯ ಪ್ರಮಾಣ ಪತ್ರವನ್ನು 'ಕವಿಮಾರ್ಗಕಾರ' ನೀಡಿದ್ದಾನೆ. ಇವರು ಒಳ್ಳೆಯ ಯೋಧರು, ಕವಿಗಳು, ಒಳ್ಳೆಯ ಪ್ರಭುಗಳು, ಚೆಲುವರು, ವಿನಯಶಾಲಿಗಳು, ಗುಣವಂತರು, ಸ್ವಾಭಿಮಾನಿಗಳು, ಶೂರರು, ಗಂಭೀರ ಸ್ವಭಾವದವರು ಮತ್ತು ವಿವೇಕಿಗಳಾಗಿದ್ದಾರೆ ಎಂದು ಕನ್ನಡಿಗರ ಗುಣವಿಶೇಷತೆಯನ್ನು ಬಣ್ಣಿಸುವುದರ ಜೊತೆಗೆ ಕನ್ನಡ ನಾಡವರ ಪ್ರಬುದ್ಧ ಸಂಸ್ಕೃತಿಯ ಅನಾವರಣಗೈದಿದ್ದಾನೆ.

ಕಸವರಮೆಂಬುದು ನೆಱೆ ಸೈ
ರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ
ಕಸವೇಂ ಕಸವರಮೇನು
ಬ್ಪಸಮಂ ಬಸಮಲ್ಲದಿದು ಮಾಡುವರೆಲ್ಲ
(ತೃತೀಯ ಪರಿಚ್ಛೇದಂ, ಪದ್ಯ–176)

ಅಂದಿನಿಂದಲೂ ಇಂದಿನವರೆಗೂ ಎಲ್ಲರೂ ಒಪ್ಪತಕ್ಕಂತಹ ಚಿನ್ನದಂತ ಮಾತ್ತೊಂದು ಕವಿರಾಜಮಾರ್ಗಕಾರ ಹೇಳುತ್ತಾನೆ. ಅಂದರೆ ಸಂಪತ್ತು ಯಾವುದೆಂದರೆ? ಅನ್ಯರ ವಿಚಾರವನ್ನು ಮತ್ತು ಅನ್ಯರ ಧರ್ಮವನ್ನು ಸಹಿಸುವ ಸಾಮರ್ಥ್ಯವೇ ಸಂಪತ್ತು. ಇಂತಹ ಸಹನಾಗುಣ ಎಲ್ಲರಲ್ಲೂ ಇರುವುದಿಲ್ಲ. ಹೀಗೆ ಸಹಿಸಿಕೊಳ್ಳದೇ ಮಿತಿಮೀರಿ ಸಂಕಟವನ್ನು ಉಂಟುಮಾಡುತ್ತಾರೆ. ಅಂತವರಿಗೆ ಕಸ ಹಾಗೂ ಕಸವರದ ಭಿನ್ನತೆಯೇ ಅರಿಯರು ಎಂದು ಸಹಿಷ್ಣುತೆಯ ತತ್ತ್ವವನ್ನು ಸಾರಿರುವುದು ಕಾಣಬಹುದು.

'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಸಾರಿರುವ ಆದಿಕವಿ ಪಂಪನು 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಅರ್ಜುನನ ಮೂಲಕ ಹೇಳಿಸಿರುವ ಬನವಾಸಿಯ ವರ್ಣನೆಯು ಕನ್ನಡಿಗರ ಗುಣ ಗೌರವ ಮತ್ತು ಆತನ ಕನ್ನಡಾಭಿಮಾನಕ್ಕೆ ಸಾಕ್ಷಿ. ಕನ್ನಡ ನಾಡಿನ ಬಗ್ಗೆ ತನಗಿದ್ದ ಮನೋಗತವನ್ನು ಕವಿ ಕಾವ್ಯಾತ್ಮಕವಾಗಿ ದಾಖಲಿಸಿದ್ದಾನೆ.

ಚಾಗದ ಭೋಗದಕ್ಕರದ ಗೇಯದ
ಗೊಟ್ಟಿಯಲಂಪಿನಿಂಪುಗ
ಳ್ಗಾರಮಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೋ ತೀರ್ದಪುದೆ ತೀರದೊಡಂ
ಮಱೆದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್
ವನವಾಸಿದೇಶದೊಳ್
(ಚತುರ್ಥಾಶ್ವಾಸಂ, ಪದ್ಯ–29)

ಬನವಾಸಿಯ ನಾಡು ತ್ಯಾಗ, ಭೋಗ, ವಿದ್ಯೆ, ಸಂಗೀತ, ಗೋಷ್ಠಿಗಳ ಸಂತೋಷ ಸೌಖ್ಯಕ್ಕೆ ಅಧೀನರಾಗಿರುವ ಮನುಷ್ಯರೇ ಮನುಷ್ಯರು. ಅಂತಹ ಅದೃಷ್ಟಶಾಲಿಗಳಾದ ಮನುಷ್ಯರಾಗಿ ಈ ನಾಡಿನಲ್ಲಿ ಹುಟ್ಟಬೇಕು. ಒಂದು ವೇಳೆ ಇಲ್ಲಿ ಹುಟ್ಟಲು ಸಾಧ್ಯವಾಗದಿದ್ದರೂ ಆ ನಂದನವನದಂತಿರುವ ಬನವಾಸಿ ದೇಶದಲ್ಲಿ ಮರಿದುಂಬಿಯಾಗಿಯೋ ಅಥವಾ ಕೋಗಿಲೆಯಾಗಿಯೋ ಹುಟ್ಟಬೇಕು ಎನ್ನುತ್ತಾನೆ. ಮುಂದುವರೆದು,

ತೆಂಕಣಗಾಳಿ
ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ
ಕೆಂದಲಂ
ಪಂಗೆಡೆಗೊಂಡೊಡಂ
ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನವುದೆನ್ನ ಮನಂ
ವನವಾಸಿದೇಶಮಂ
(ಚತುರ್ಥಾಶ್ವಾಸಂ, ಪದ್ಯ–30)

ಅತಿ ಸುಖಯುತವಾದ ದಕ್ಷಿಣ ದಿಕ್ಕಿನ ತಂಪಾದ ಗಾಳಿಯ ಸ್ಪರ್ಶವಾದರೂ, ಒಳ್ಳೆಯ ಮಾತನ್ನು ಕೇಳಿದರೂ, ಇಂಪಾದ ಗಾಯನವು ಕಿವಿಯನ್ನು ಪ್ರವೇಶಿಸಿದರೂ, ಅರಳಿದ ಮಲ್ಲಿಗೆ ಹೂವನ್ನು ಕಂಡರೂ, ನಿದ್ರಾಮುದ್ರಿತವಾದ ರತಿ ಸೌಖ್ಯಕ್ಕೆ ಪಾತ್ರವಾದರೂ, ವಸಂತದ ಉತ್ಸವವು ಪ್ರಾಪ್ತವಾದರೂ, ಏನೇ ಹೇಳಲಿ ಯಾರು ಅಕುಂಶದಿಂದ ತಿವಿದರೂ ನನ್ನ ಮನಸ್ಸು ಬನವಾಸಿ ದೇಶವನ್ನು ನೆನೆಯುತ್ತದೆ ಎಂದು ಪಂಪ ಈ ನಾಡನ್ನು ಬಹುವಾಗಿ ಬಣ್ಣಿಸಿದ್ದಾನೆ.

ಇಡೀ ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿಯೇ ಅಪೂರ್ವವಾದುದು

12ನೆಯ ಶತಮಾನ. ಶರಣರು ಧಾರ್ಮಿಕ ಮತ್ತು ಸಾಮಾಜಿಕ ಬದುಕಿನಲ್ಲಿ ರೋಷಿ ಹೋಗಿದ್ದ ಜನರಿಗೆ ಲಿಂಗರಹಿತ, ಜಾತಿ ರಹಿತ, ವರ್ಣರಹಿತ, ಸಮಾಜವನ್ನು ನಿರ್ಮಿಸಬಯಸಿದರು. ಶರಣರು ಸರಳವಾದ ಭಾಷೆ ಬಳಸಿದರು. ಉದಾತ್ತವಾದ ಭಾವವನ್ನು ಬಿತ್ತಿದರು. ಸುಸಂಸ್ಕೃತ ಸಮಾಜದ ಸೂತ್ರ ಹೇಳಿದರು. ಬಸವಣ್ಣನವರು ಸುಸಂಸ್ಕೃತ ವ್ಯಕ್ತಿಯ ನೈತಿಕ ಜೀವನದ ಸಾರವನ್ನು ಸಂಗ್ರಹಿಸಿದಂತಿರುವ ವಚನವಿದು;

ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ;
ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ;
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ.
(ಬ.ಷ.ವ, ವಚನ–238, ಪುಟ–60)

ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ರಚಿತವಾಗಿರುವ ಹಂಪೆಯ 'ಲಕ್ಷ್ಮೀಧರಾಮಾತ್ಯ ಶಾಸನ' ದ ಒಂದು ಪದ್ಯ ಕನ್ನಡಿಗರ ಉದಾತ್ತ ಸಂಸ್ಕೃತಿಯ ಬೀಜಮಂತ್ರದಂತಿದೆ. ತಾಯಿಯೊಬ್ಬಳು ಹಾಲುಣಿಸುವಾಗ ತನ್ನ ಮಗುವಿನ ಕಿವಿಯಲ್ಲಿ ಬಿತ್ತುವ ಶ್ರೇಷ್ಠ ಸಂಸ್ಕಾರದ ವಿಚಾರಗಳನ್ನು ದಾಖಲಿಸಿದೆ.

ಕೆರೆಯಂ ಕಟ್ಟಿಸು ಬಾವಿಯಂ ಸಮೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರಗ್ಗಿಂಬುಕೆಯ್ ನಂಬಿದ
ರ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯನುತ್ತಿಂತೆಲ್ಲವಂ ಪಿಂದೆ ತಾ
ಯೆರೆದಳ್ವಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ
(ಸಾ. ಕ. ಸಾ. ಚರಿತ್ರೆ ಸಂ–2, ಹು.ಕಾ.ಜಯದೇವ್,ಪುಟ–41)

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನದಲ್ಲಿ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯ ನೀಡು, ಸತ್ಪುರುಷರನ್ನು ರಕ್ಷಿಸು– ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಉಣ್ಣ ಬಡಿಸಿದಳು ಆತನ ತಾಯಿ ಎಂಬ ಅದ್ಭುತ ಕಲ್ಪನೆ ನೀಡುವುದರ ಜೊತೆಗೆ ಸಂಸ್ಕಾರಯುತ ಕನ್ನಡಿಗನ ಸಂಸ್ಕೃತಿಯ ತಿರುಳನ್ನೇ ಮುಂದಿಟ್ಟಿದ್ದಾಳೆ.

ಈ ರೀತಿ ಕನ್ನಡ ಸಾಹಿತ್ಯದ ಉದ್ದಗಲಕ್ಕೂ ಹಲವಾರು ಕವಿಗಳು ನಾಡ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ. ಅದನ್ನು ಅರಿತು ಅಳವಡಿಸಿಕೊಂಡು ಸಾಗಬೇಕಾಗಿದೆ.

ಒಟ್ಟಾರೆಯಾಗಿ ಕನ್ನಡ ನಾಡಿನ ವಿಸ್ತಾರ, ಕನ್ನಡ ನಾಡವರು, ಪ್ರಾಕೃತಿಕ ಸಮೃದ್ಧಿ, ಅದರ ವೈಶಿಷ್ಟ್ಯ, ಕನ್ನಡಿಗರ ಪ್ರತಿಭಾ ಸಂಪನ್ನತೆ, ಕಾವ್ಯ ಪರಿಣತಿ, ಕನ್ನಡ ನಾಡಿನಲ್ಲಿ ಜನಿಸುವ ಭಾಗ್ಯ, ಕನ್ನಡಿಗರ ಧೈರ್ಯ–ಶೌರ್ಯ, ಶ್ರಿಸಾಮಾನ್ಯನ ಕರ್ತವ್ಯ ನಿಷ್ಠೆ ಮುಂತಾದ ಸಂಸ್ಕೃತಿಯ ವಿಭಿನ್ನ ನೆಲೆಯ ವಿಚಾರಗಳನ್ನು ಕಾಣಬಹುದಾಗಿದೆ.

ಆಕರ ಗ್ರಂಥಗಳು

1. ಸೀತಾರಾಮಯ್ಯ ಎಂ.ವಿ (ಸಂ) – ಶ್ರೀವಿಜಯಕೃತ ಕವಿಮಾರ್ಗಂ – ಕಸಾಪ, ಬೆಂಗಳೂರು, 2011
2. ಅನಂತರಂಗಚಾರ್ ಎನ್(ಗದ್ಯಾನುವಾದ) – ಪಂಪ ಮಹಾಕವಿ ವಿರಚಿತ ಪಂಪಭಾರತಂ – ಕಸಾಪ, ಬೆಂಗಳೂರು, 2011
3. ವೀರಣ್ಣ ಸಿ. (ಸಂ) – ಪರ್ಯಾಯ ಸಂಸ್ಕೃತಿ ವಚನ ಸಂಪುಟ – ಅ.ಭಾ ಶರಣ ಸಾಹಿತ್ಯ ಪರಿಷತ್ತು, ಮೈಸೂರು, 2013
4. ತಿಪ್ಪೇರುದ್ರಸ್ವಾಮಿ ಎಚ್ – ಕರ್ಣಾಟಕ ಸಂಸ್ಕೃತಿ ಸಮೀಕ್ಷೆ – ಡಿ.ವಿ.ಕೆ ಮೂರ್ತಿ. ಮೈಸೂರು, 2015